ಫೋಟೋಗಳನ್ನು ಗಮನಿಸಿದ. ಹೆನ್ರಿಗೆ ಎರಡು ಮದುವೆಯಾಗಿರುವ ವಿಚಾರ ತಿಳಿಯಿತು. ಕೆಲವು ಫೋಟೋಗಳು ಬೇಕು ಎಂದು ಎತ್ತಿಟ್ಟುಕೊಂಡು, ಮತ್ತೆ ಬೇಕಾದರೆ ಬರುತ್ತೇನೆ ಎಂದು ಅಲ್ಲಿಂದ ಹೊರಟು ಬಂದ.

* * *

ಯಾವ ನಿರ್ಧಾರಕ್ಕೂ ಬರದೆ ಸುಮ್ಮನೆ ಯಾವನೋ ಬರೆದ ಪತ್ರದ ಎಳೆಯನ್ನಿಡಿದು ತಾನು ಸಹಜ ಸಾವನ್ನು ಅಸಹಜ ಸಾವು ಅಂತ ಪ್ರೂವ್ ಮಾಡಲು ಹೊರಟ್ಟಿದ್ದೀನಾ ಅಂತ ಮುಜೀದ್ ಹದಿನೈದು ದಿನದಿಂದಲೂ ಯೋಚಿಸಿ ಯೋಚಿಸಿ, ಅನುಮಾನ ಬಂದ ಕೆಲವರನ್ನು ಸ್ಟೇಷನ್‌ಗೆ ಕರೆಸಿ ವಿಚಾರಿಸಿದರೂ ಸುಳಿವೇನೂ ಸಿಕ್ಕಿರಲಿಲ್ಲ. ಆ ಇಳವರಸಿನ, ಶಿವನ್ನ, ಹಾಗೇ ಮ್ಯಾನೇಜರನ್ನ ಕರಕೊಂಡು ಬಾ ಎಂದು ಕಾನ್‌ಸ್ಟೇಬಲ್‌ಗೆ ಹೇಳಿದ. ಬಂದವರಲ್ಲಿ ಮೊದಲು ಮ್ಯಾನೇಜರನ್ನು ಕಳಿಸು ಎಂದ.

‘ಹೆನ್ರಿಗೆ ಇಬ್ಬರು ಹೆಂಡ್ತಿರ ಜೊತೆ ಸಂಬಂಧ ಹೇಗಿತ್ತು?’

‘ಸಾಹೇಬ್ರು ಮೊದಲು ಮದುವೆಯಾಗಿದ್ದು ಎಲ್ಲೋ ಗೊತ್ತಿಲ್ಲ. ಅವರ ಹೆಂಡತಿ ಸ್ಪಾನಿಷ್ ಮಾತಾಡ್ತಿದ್ರು. ಅವರಿಗೆ ಇಬ್ಬರು ಹೆಣ್ಣುಮಕ್ಕಳಿದ್ರು. ಆದ್ರೆ ಹೆನ್ರಿ ಸಾಹೇಬರಿಗೆ ಈ ದೇಶ ಇಷ್ಟ, ಅವರಿಗೆ ಇಲ್ಲಿರೋದು ಅಂದ್ರೆ ಆಗ್ತಿರಲಿಲ್ಲ. ಹಾಗಾಗಿ ಬಂದು ಕೆಲವು ತಿಂಗಳು ಇದ್ದು ಹೊರಟುಬಿಡುತ್ತಿದ್ದರು. ಆಗೆಲ್ಲಾ ಅವರುಗಳ ನಡುವೆ ದೊಡ್ಡ ಮಟ್ಟದಲ್ಲಿ ಜಗಳವಾಗ್ತಿತ್ತು. ಮಕ್ಕಳೂ ಕೂಡ ಅವರಮ್ಮನ ಹಿಂದೆ ಹೋಗುತ್ತಿದ್ದರು.’

‘ಹಾಗಾದ್ರೆ ಎರಡನೇ ಮದುವೆ ಆಗಿದ್ದು ಯಾವಾಗ?’

‘ರೆಸಾರ್ಟ್ ಪ್ರಾರಂಭಿಸಿದ ನಂತರ’.

‘ಅಂದ್ರೆ?’

‘ಹೌದು, ಆಕೆ ಅಮೆರಿಕದಿಂದ ಬಂದಿದ್ರು. ಪ್ರವಾಸಿಗರಾಗಿ. ಹತ್ತು ವರ್ಷದ ಮಗನೊಂದಿಗೆ ಬಂದು ತಿಂಗಳ ಕಾಲ ಇಲ್ಲಿದ್ದರು. ಆಗ ಹೆನ್ರಿ ಸಾಹೇಬರಿಗೆ ಆಕೆಯ ಮೇಲೆ ಮೋಹವಾಯಿತು. ಪತಿಯಿಂದ ದೂರವಾಗಿ ಶಾಂತಿ ಅರಸಿ ಬಂದ ಆಕೆ ಹೆನ್ರಿ ಸಾಹೇಬರ ತೆಕ್ಕೆಗೆ ಬಿದ್ದಳು. ಅವರಿಬ್ಬರು ಸುಖವಾಗಿಯೇ ಇದ್ದರು’.

‘ಇದು ಮೊದಲ ಹೆಂಡ್ತಿಗೆ ತಿಳಿದಿತ್ತಾ?’

‘ತಿಳಿದು ಆಕೆ ಗಲಾಟೆ ಮಾಡಿ ಹೋದವಳು ಬರಲೇ ಇಲ್ಲ’.

‘ಎರಡನೇ ಹೆಂಡ್ತಿ?’

‘ಅವರೂ ಕೂಡ ಮೊದಮೊದಲು ಮಗನ ಜೊತೆ ಬರ್ತಿದ್ದವರು ಆಮೇಲೆ ಒಬ್ಬರೇ ಬಂದು ತಿಂಗಳುಗಟ್ಟಲೆ ಇಲ್ಲೇ ಇರುತ್ತಿದ್ದರು. ಅವರಿಬ್ಬರ ಮಧ್ಯೆ ಅನ್ಯೋನ್ಯತೆ ಇತ್ತು ಅನ್ಸತ್ತೆ’.

‘ಅನ್ಸುತ್ತೆ ಅಂದ್ರೆ?’

‘ನಾನು ನೋಡಿದ್ದು ಈಗ್ಗೆ ಹತ್ತು ವರ್ಷದ ಹಿಂದೆ. ಹೆನ್ರಿ ಸಾಹೇಬರನ್ನು ಕೇಳಿದ್ರೆ ಅವರು ಏನನ್ನೂ ಹೇಳ್ತಿರಲಿಲ್ಲ. ಅವಾಗವಾಗ ವಿಡಿಯೊ ಕಾಲ್‌ನಲ್ಲಿ ಮಾತನಾಡುತ್ತಿದ್ದರು ಅಷ್ಟೆ’.

‘ಅವರಿಗೆ ಗೆಳೆಯ ಗೆಳತಿಯರು, ಹಾಬಿಸ್ ಏನಾದ್ರೂ?’

‘ಇಲ್ಲ, ಅವರ ತಂದೆ ತುಂಬಾ ಜನಾನುರಾಗಿ. ಈ ಯಪ್ಪಾ ಯಾವಾಗಲೂ ಎಸ್ಟೇಟ್ ಸುತ್ತುತ್ತಾ ಫೋಟೋಗ್ರಫಿ ಮಾಡೋರು. ಅಪರೂಪಕ್ಕೆ ಚರ್ಚ್‌ಗೆ ಹೋಗೋರು. ಸಂಜೆ ಒಬ್ಬರೇ ಕುಳಿತು ಸೂರ್ಯಾಸ್ತ ನೋಡುತ್ತಾ ರಮ್ಮು–ವೈನ್ ಕುಡಿಯೋರು. ಆ ಸಮಯದಲ್ಲಿ ಯಾರೂ ಡಿಸ್ಟರ್ಬ್ ಮಾಡುವಂಗಿರಲಿಲ್ಲ’.

‘ಇಲ್ಲಿನ ಆಳುಕಾಳುಗಳನ್ನ ಹೇಗೆ ನೋಡಿಕೊಳ್ಳುತ್ತಿದ್ರು?’ ಮುಜೀದ್ ಕೊನೆಯ ಪ್ರಶ್ನೆಯೆಂಬಂತೆ ಕೇಳಿದ.

‘ನಾನು ಬಂದು ಎರಡು ವರ್ಷ ಆಗುತ್ತೆ. ಎರಡೆರಡು ವರ್ಷಕ್ಕೂ ಮ್ಯಾನೇಜರ್ ಅನ್ನು ಬದಲಾಯಿಸ್ತಿದ್ರು. ಯಾರನ್ನೂ ನಂಬ್ತಿರಲಿಲ್ಲವಂತೆ. ಶಿವ, ಇಳವರಸಿ ಮಾತ್ರ ತುಂಬಾ ಹಳಬರು’.

‘ಶತ್ರುಗಳೇನಾದ್ರೂ ಇದ್ರಾ?’



‘ಇಲ್ಲ ಅನ್ನಿಸುತ್ತೆ. ಮಾತೇ ಆಡ್ತಿರಲಿಲ್ಲ. ತಮಿಳು ಕಲಿತಿದ್ರು ಇಳವರಸಿ, ಶಿವನನ್ನ ಬಿಟ್ರೆ ಬೇರೆ ಯಾರತ್ರನೂ ಮಾತಾಡ್ತಾ ಇರಲಿಲ್ಲ. ಪ್ರತಿ ತಿಂಗಳು ಅವರೇ ಹೋಗಿ ಬ್ಯಾಂಕ್‌ನಿಂದ ಹಣ ಟ್ರಾನ್ಸ್‌ಫರ್ ಮಾಡೋರು. ಕಾರಿನ ಶೋಕಿ ಜಾಸ್ತಿ ಇತ್ತು. ಓಡಿಸ್ತಾರೋ ಇಲ್ಲವೋ ಅವರು ಇಷ್ಟ ಪಟ್ಟರೆ ಬೇಕೇಬೇಕಿತ್ತು’.

‘ಸರಿ ನೀನು ಹೋಗು, ಇಳವರಸಿನಾ ಕಳಿಸು’ ಎಂದು ಮುಜೀದ್ ರೆಕಾರ್ಡು ಮಾಡುತ್ತಿದ್ದ ಫೋನಿನ ಬಟನ್ ಆಫ್ ಮಾಡಿದ.

‘ಇಳವರಸಿ, ಎಷ್ಟು ವರ್ಷದಿಂದ ರೆಸಾರ್ಟ್‌ನಲ್ಲಿದ್ದೀ?’

‘ಇಪ್ಪತ್ತು ವರ್ಷದಿಂದ ಇರಬೇಕು. ನಮ್ಮವ್ವ ಹೆನ್ರಿ ಸಾಹೇಬ್ರ ತಂದೆ ಹತ್ರ ಕೆಲಸ ಮಾಡ್ತಿದ್ಲು. ನಾನು ಚಿಕ್ಕವಳಿದ್ದಾಗಲೇ ಅವರ ಮನೇಲಿಯೇ ಗೇಯ್ತಾ ಇದ್ದೀನಿ’.

‘ಮನೆ ಕೆಲಸಕ್ಕೆ ನೀನಲ್ಲದೆ ಇನ್ಯಾರಿದ್ರು?’

‘ಅವರು ಬೇರೆ ಯಾರನ್ನೂ ಮನೆಗೆ ಸೇರಿಸ್ತಿರಲಿಲ್ಲ. ಬೆಳಿಗ್ಗೆ ನಾನು ಬಂದ್ರೆ ಸಂಜೆ ತನಕ ಒಂದಲ್ಲ ಒಂದು ಕೆಲಸ ಮಾಡ್ತಿದ್ದೆ. ಸಾಹೇಬರಿಗೆ ಮನೆ ಯಾವಾಗಲೂ ಕ್ಲೀನ್ ಆಗಿರಬೇಕಿತ್ತು. ಅವರು ಇಟ್ಟ ಸಾಮಾನು ಆ ಕಡೆ ಈ ಕಡೆ ಆಗಂಗಿಲ್ಲ, ಉಗ್ರ ಕಾಳಪ್ಪ ಆಗಬಿಡೋರು. ರಾತ್ರಿ ಶಿವ ಮಲಗ್ತಿದ್ದ ಅವರ ಜೊತೆ’.

‘ಶಿವನಾ? ಏಕೆ? ಅವರೊಬ್ಬರೆ ಮಲಗಲು ಹೆದರಿಕೊಳ್ತಿದ್ರಾ?’

‘ಏ ಅವರಿಗೆಂತಹ ಭಯ? ಅದೇನೋ ಕೆಲ ವರ್ಷಗಳಿಂದ ಸಾಹೇಬ್ರು ನನ್ನನ್ನು ಯಾರೋ ಕೊಲೆ ಮಾಡ್ತಾರೆ ಅಂತ ಬಡಬಡಿಸೋರು. ಅದಕ್ಕೆ ಅವರೇ ಶಿವನ್ನ ಮಲಗಲು ಕರೀತಿದ್ರು. ಅವನು ನಾನು ಬೆಳಿಗ್ಗೆ ಬಂದ ನಂತರ ಹೊರಟು ಬಿಡುವ. ಕೊನೆಯವರೆಗೂ ಅವರನ್ನು ನೆರಳಿನಂತೆ ನೋಡಿಕೊಳ್ತಿದ್ದ’.

‘.....’

‘ಫೋನ್‌ನಲ್ಲಿ ಫಾರಿನ್‌ನಲ್ಲಿದ್ದವರನ್ನು ಮಾತಾಡಿಸಿದ ಮೇಲೆ ಅವರು ಮೊದಲಿನಂಗೆ ಇರ್ತಿರಲಿಲ್ಲ. ಅಷ್ಟು ತಿಳಿಯದು ನಂಗೆ. ಶಾಂತವಾಗಿದ್ದವರು ಫೋನಿನಲ್ಲಿ ಮಾತಾಡಿದ ಮೇಲೆ ಕೈಗೆ ಸಿಕ್ಕಿದ್ದನ್ನು ಎತ್ತಿ ಕುಕ್ಕವರು. ಏನು ಅಂತ ಮಾತ್ರ ಹೇಳ್ತಿರಲಿಲ್ಲ’.

ಶಿವನನ್ನು ಕರೆಸಿ ವಿಚಾರಿಸಿದರೂ ಅಂತ ವಿಶೇಷವಾದದ್ದೇನೂ ತಿಳಿಯಲಿಲ್ಲ.

* * *

ಮತ್ತೊಂದು ಪತ್ರ ಮುಜೀದ್‌ಗೆ ತಲುಪಿತು. ಬಿಡಿಸಿ ಓದಿದರೆ ಮತ್ತದೇ ‘ಹೆನ್ರಿ ಸಾಹೇಬರದು ಸಹಜ ಸಾವಲ್ಲ. ಏನಾದ್ರೂ ಸುಳಿವು ಗೊತ್ತಾಯ್ತೇ? ಹೊಂಚು ಹಾಕಿದ ದೆವ್ವ ಬೇಡ ಬೇಡ ಎಂದರೂ ಜೊತೆಯೇ ಬರುತ್ತೆ. ಈ ಒಗಟು ಬಿಡಿಸಿ. ಏನಾದರೂ ಅರ್ಥವಾಗಬಹುದು’ ಎಂದಷ್ಟೇ ಇತ್ತು.

ಮುಜೀದ್ ಈಗ ಒಗಟು ಹಿಡಿದು ಬಿಡಿಸುವಂತೆ ಎಲ್ಲರನ್ನೂ ಕೇಳಿದ. ಉತ್ತರ ಮಾತ್ರ ಶೂನ್ಯ. ಕೆಲ ದಿನ ಹೀಗೇ ಕಳೆಯಿತು. ಒಂದು ದಿನ ಇದ್ದಕ್ಕಿದ್ದಂತೆ ಸ್ಟೇಷನ್ನಿಗೆ ಬಂದವನು ಜೀಪ್ ತೆಗೆಯುವಂತೆ ಹೇಳಿ ಇಬ್ಬರು ಕಾನ್‌ಸ್ಟೇಬಲ್‌ಗಳಿಗೆ, ‘ಹೆನ್ರಿ ಸಾಹೇಬರ ಕೊಲೆ ಮಾಡಿದವನನ್ನು ಅರೆಸ್ಟ್ ಮಾಡೋಣ ಬನ್ನಿ’ ಎಂದು ಗಂಭೀರವಾಗಿ ಹೇಳಿದ.

‘ಹಾವು ಕಚ್ಚಿ ಸತ್ತ ಹೆನ್ರಿ ಸಾಹೇಬರನ್ನು ಕೊಲೆ ಯಾರ್ ಮಾಡಿದ್ದಾರೆ ಸಾರ್? ಸುಮ್ಮನೇ ನೀವು ಆ ಪತ್ರದ ಕಾರಣದಿಂದ ಟೈಂ ವೇಸ್ಟ್ ಮಾಡ್ತಿದ್ದೀರಿ’ ಎಂದ ಷಣ್ಮುಂಗನಿಗೆ, ‘ಬಾರಯ್ಯ ಸುಮ್ಮನೆ’ ಎಂದು ವ್ಯಾಲಿ ರೆಸಾರ್ಟ್ ಗೇಟ್ ಬಳಿ ಬಂದ.

‘ಮ್ಯಾನೇಜರ್ ಊರಲ್ಲಿ ಇಲ್ಲ’ ಎಂದ ವಾಚ್‌ಮನ್.

‘ಮನೆಯಲ್ಲಿ ಯಾರಿದ್ದಾರೆ?’

‘ಸಾವಿಗೆ ಅಂತ ಬಂದಿದ್ದ ಅವರ ಹೆಂಡ್ತಿ–ಮಕ್ಕಳು ಇದ್ದಾರೆ’.

‘ಯಾವ ಹೆಂಡ್ತಿ?’

‘ಅದು ನನಗೇನು ಗೊತ್ತು ಸಾಮಿ’ ಎಂದ.

ಸೀದಾ ಬಂಗಲೆಗೆ ನುಗ್ಗಿದ ಇವನನ್ನು ನೋಡಿ ಹೆನ್ರಿ ಪತ್ನಿ ಪರಿಚಯಿಸಿಕೊಂಡಳು. ತನ್ನ ಹಾಗೂ ಇಬ್ಬರು ಹೆಣ್ಣು ಮಕ್ಕಳ ಪರಿಚಯ ಮಾಡಿಸಿದಳು. ಮುಜೀದ್ ಪ್ರಾಪರ್ಟಿ ರಿಜಿಸ್ಟರ್ ಕಾಪಿಯನ್ನು ಆಕೆಗಿತ್ತು, ‘ಇದು ಯಾರ ಹೆಸರಿನಲ್ಲಿದೆ ನೋಡಿ’ ಎಂದ.